**4 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಧಾರವಾಡ**

**ಎಸ್. ಸಿ. ನಂ. 27/2022**

**ಪಿ ಡಬ್ಲ್ಯೂ: 8**

**ಸಿ ಡಬ್ಲ್ಯೂ: 10**

| | | |
|---|---|---|
| ಸಾಕ್ಷಿದಾರರ ಹೆಸರು | : | ಅಂಬಿಕಾ ಕಟ್ಟಿಮನಿ |
| ಗಂಡನ ಹೆಸರು | : | ಗಿರೀಶ |
| ವಯಸ್ಸು | : | 32 ವರ್ಷಗಳು |
| ಉದ್ಯೋಗ | : | ಗೃಹಿಣಿ |
| ವಾಸಸ್ಥಳ | : | ಲೈನ ಬಜಾರ, ಧಾರವಾಡ |

ದಿನಾಂಕ:17-01-2025 ರಂದು ಸಾಕ್ಷಿಯನ್ನು ಕರೆಯಿಸಿ ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ: ಸರ್ಕಾರಿ ಅಭಿಯೋಜಕರಿಂದ:**

ಚಾಸಾ-1 ಮತ್ತು ಚಾಸಾ-15 ನನಗೆ ಪರಿಚಿತರು. ನಾನು ಚಾಸಾ-15 ರವರ ಮನೆಯಲ್ಲಿ ಬಾಡಿಗೆಗೆ ಇದ್ದು ಅವರ ಪರಿಚಯ ಇರುತ್ತದೆ. ಪರಶುರಾಮರವರ ಮನೆಯ ಮಹಡಿಯ ಮೇಲೆ ನಾವು ಬಾಡಿಗೆಗೆ ಇದೇವು. ನಾನು, ನನ್ನ ಗಂಡ ಮತ್ತು ಇಬ್ಬರು ಮಕ್ಕಳೊಂದಿಗೆ ನಾಲ್ಕು ವರ್ಷದಿಂದ ಅದೇ ಮನೆಯಲ್ಲಿ ವಾಸ ಇದ್ದೇನೆ. ಪರಶುರಾಮ ಸುಣಗಾರ ಮನೆಯಲ್ಲಿ ತಂದೆ-ತಾಯಿ ಮತ್ತು ನಾಲ್ಕು ಜನ ಹೆಣ್ಣು ಮಕ್ಕಳಿದ್ದು ಚಾಸಾ-1 ತನುಜಾ ಸಹ ಅವರ ಮಗಳಾಗಿದ್ದಳು. ದಿ:21-02-2022 ರಂದು ಮಧ್ಯಾಹ್ನ 11 ಗಂಟೆಗೆ ನಾನು ಮನೆಯಲ್ಲಿ ಕೆಲಸ ಮಾಡಿಕೊಂಡಿದ್ದಾಗ ತನುಜಾಳು ಜೋರಾಗಿ ಚೀರಾಡುವ ಶಬ್ದ ಕೇಳಿಸಿತ್ತು ನಾನು ಕೆಳಗೆ ಬಂದೆ ಆಗ ಶಿವಶಂಕರ ತನುಜಾಳ ಕಪ್ಪಾಳಕ್ಕೆ ಹೊಡೆದಾ. ತನುಜಾ ಮತ್ತು ಶಿವಶಂಕರ ತನುಜಾಳ ಮನೆಯಲ್ಲಿ

ಇದ್ದರು. ಮನೆಯಲ್ಲಿ ತಂದೆ ತಾಯಿ ಯಾರು ಇಲ್ಲ ನೀನು ಹೋಗು ಎಂದು ನಾನು ಹೇಳಿದೆ ಆತನು ನನ್ನ ಮಾತು ಕೇಳಲಿಲ್ಲ. ಆತನು ತನುಜಾಳ ಎಡಗಾಲಿನ ತೊಡೆಯ ಹಿಂದಿನ ಭಾಗಕ್ಕೆ ಚಾಕುವಿನಿಂದ ಚುಚ್ಚಿದನು. ಆಕೆ ಜೋರಾಗಿ ಚೀರಿದಳು, ಜನ ಸೇರಿದಾಗ ಆತನು ಓಡಿ ಹೋಗಿರುತ್ತಾನೆ. ಆತನು ತನುಜಾಳನ್ನು ಕೊಲೆ ಮಾಡುವ ಉದ್ದೇಶದಿಂದ ಚಾಕುವಿನಿಂದ ಚುಚ್ಚಿದ್ದಾನೆ. ನಾವು ಆಕೆಯನ್ನು ಸಮಾಧಾನ ಮಾಡಿದೇವು ಆಕೆಯ ತಂದೆ ಬಂದಿದ್ದು ಆಟೋದಲ್ಲಿ ದಾವಾಖಾನೆಗೆ ಕರೆದುಕೊಂಡು ಹೋಗಿರುತ್ತಾರೆ. ಸದರಿ ಶಿವಶಂಕರ ತನುಜಾಗೆ ಗಂಡನಾಗಿರುತ್ತಾನೆ. ತನುಜಾಳಗೆ ಅವಳ ಗಂಡ ಶಿವಶಂಕರ ಕಿರುಕುಳ ಕೊಡುತ್ತಿದ್ದಾ ಹಾಗಾಗಿ ಆಕೆಯು ತವರು ಮನೆಗೆ ಬಂದು ಉಳಿದುಕೊಂಡಿದ್ದಳು.

ನಾನು ತನುಜಾಳ ಮನೆಗೆ ಹೋದಾಗ ತನುಜಾಳನ್ನು ಬಿಟ್ಟು ಬೇರೆ ಯಾರು ಇರಲಿಲ್ಲ. ಶಿವಶಂಕರನ್ನು ನೋಡಿದರೆ ನಾನು ಗುರ್ತಿಸಬಲ್ಲೆ. ಈ ದಿನ ಆರೋಪಿಯು ಗೈರು ಹಾಜರಾಗಿದ್ದು ಆತನ ಗುರ್ತಿಸುವಿಕೆಯನ್ನು ತಕರಾರು ಮಾಡುವುದಿಲ್ಲವೆಂದು ವಿನಾಯಿತಿ ಅರ್ಜಿ ಸಲ್ಲಿಸಿದ್ದು ಆತನ ಗುರ್ತಿಸುವಿಕೆಯಿಂದ ವಿನಾಯಿತಿ ನೀಡಲಾಗಿದೆ.

ಈಗ ನನಗೆ ನ್ಯಾಯಾಲಯದಲ್ಲಿ ತೋರಿಸಿದ ಚಾಕುವಿನಿಂದಲೆ ಆರೋಪಿಯು ತನುಜಾಳಿಗೆ ಹಲ್ಲೆ ಮಾಡಿರುತ್ತಾನೆ. ಪೋಲೀಸರಿಗೆ ಈ ಬಗ್ಗೆ

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಎಂ.ಎಂ.ಕೆ ವಕೀಲರಿಂದ:**

ಎಂಎಂಕೆ ವಕೀಲರು ಹಿರಿಯ ಸಿವಿಲ್ ನ್ಯಾಯಾಲಯದಲ್ಲಿ ಕ್ರಿಮೀನಲ್ ಕೇಸನಲ್ಲಿ ತನಿಖಾಧಿಕಾರಿಯ ಪಾಟೀ ಸವಾಲು ಮಾಡುತ್ತಿದ್ದು ಸಮಯವಕಾಶ ಬೇಕು ಎಂದು ಕಿರಿಯ ವಕೀಲರು ಕೇಳಿದ್ದು ಸಕಾರಣವಾದ ಕಾರಣ ಒಂದು ಬಾರಿ ಕೇಸನ್ನು ಪಾಟೀ ಸವಾಲಿಗೆ ಎಂದು ಮುಂದುಡಲಾಗಿದೆ.

(ಸಾಕ್ಷಿದಾರರ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಗೆ ಹೇಳಿ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಿಸಲಾಗಿದೆ.)

ಓ ಹೇ ಕೇ ಸರಿ ಇದೆ.

ನಾಲ್ಕನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಧಾರವಾಡ.